


ನಂತರದಲ್ಲಿ ಆತನನ್ನು ಹೋಂವರ್ಕ್‌ಗೆ ಕೂರಿಸುತ್ತಿದ್ದಳು. ಅಪ್ಪನ 'ಮಗ್ಗಿ ಕಾಟಕ್ಕೆ' ಮಗುವು ನಲುಗಿ, ರಾತ್ರಿ ಊಟ ಮಾಡದೆ ಮಲಗಬಹುದು ಎಂಬ ಮುನ್ನೆಚ್ಚರಿಕೆಯಿಂದ ಇಳಿಸಂಜೆಯಾಗುತ್ತಲೇ ಮಗುವಿಗೆ ತಿನ್ನಿಸಿ... ಶಾಲೆಯ ಡ್ರಾಯಿಂಗ್ ಪುಸ್ತಕಗಳನ್ನು ಆತನೆಡೆಗೆ ಹರಡಿ ಮಂಚದ ಮೇಲೆ ಕೂರಿಸಿ ಬಿಡುತ್ತಿದ್ದಳು. ಈ 'ದೃಶ್ಯ', ಮಗುವಿನ ಅಪ್ಪನ ಮನಃಶಾಂತಿಗಾಗಿ. ಅಪ್ಪ ಮನೆ ಒಳಗೆ ಇನ್ನೇನು... ಬರುತ್ತಿದ್ದಾರೆ ಎನ್ನುವಾಗಲೇ ಕೌಶಿಕ ಚಿತ್ರದ ಪುಸ್ತಕಗಳನ್ನು ಆಚೆಗೆ ಸರಿಸಿ, ಸರಸ್ವತಿ 'ಸ್ತೋತ್ರ'ವೆಂಬಂತೆ ಮಗ್ಗಿ ಪುಸ್ತಕಗಳನ್ನು ಮುಂದಿಟ್ಟುಕೊಂಡು ಅಪ್ಪನ ಕಣ್ಣುಗಳಿಗೂ ಮನಸ್ಸಿಗೂ ಶಾಂತಿಯನ್ನು ಒದಗಿಸುತ್ತಿದ್ದುದುಂಟು...

ಇದೀಗ... ಕುಮುದಳು ಮಗನನ್ನು ರಮಿಸುತ್ತ... 'ಆಯ್ತಪ್ಪ ರಾಜ... ನೀನೀಗ ಬ್ರಷ್ ಮಾಡಿ ಹಾಲು ಕುಡಿ; ನಂತರ ನಾವಿಬ್ರೂ ಜತೆಯಾಗಿ ತಿಂಡಿ ತಿನ್ನುತ್ತ... ಬಂಡೀಪುರದ ಹುಲಿ ಬಗ್ಗೆ ಮಾತಾಡುವ...'

'ನಂಗೆ ಏನೇನೂ ಬೇಡ... ತಿಂಡಿನೂ ಬೇಡ... ಹಾಲೂ ಬೇಡ...' ಎಂದು ಮಗು ಕೌಶಿಕ ಬಿಕ್ಕಳಿಸಿ ಅಳುತ್ತಾ ಮಲಗುವ ಕೋಣೆಯತ್ತ ಓಡಿ, ಮತ್ತೆ ಮಂಚದ ಮೇಲೆ ಮಲಗಿಕೊಂಡ.

ಇದೀಗ ಕೌಶಿಕ, 'ನಾನು ಹುಲಿ ಜೊತೇನೆ ಇರ್ತೀನಿ... ಹೋಂವರ್ಕ್ ಮಾಡಲ್ಲ... ಮಾಡಲ್ಲ...' ಎಂದು ರಂಪಾಟ ಎಬ್ಬಿಸಿ ಕಿರುಚುತ್ತ ಅಳತೊಡಗಿದಾಗ ಕುಮುದ, ಸಿಟ್ಟು ಕರಗಿದ ಮೇಲೆ ಮಗನನ್ನು ಸಮಾಧಾನ ಮಾಡಿದರಾಯಿತು, ಅದಕ್ಕಿಂತ ಮೊದ್ಲು ಮಧ್ಯಾಹ್ನದ ಅನ್ನ– ಸಾಂಬಾರು – ಪಲ್ಯ ಮಾಡಿ ಮುಗಿಸೋಣ ಎಂದು ತೆಂಗಿನಕಾಯಿ ತುರಿದಿಟ್ಟು, ಮಸಾಲೆ ಹುರಿದು, ತರಕಾರಿ ಹೆಚ್ಚಿಟ್ಟು, ಸಿಗಡಿ ಮೀನನ್ನು ಸಜ್ಜು ಮಾಡಿಡುವಷ್ಟರಲ್ಲಿ ಸೂರ್ಯ ನಡುನೆತ್ತಿಗೆ ಬಂದಾಗಿತ್ತು.

ಇನ್ನೇನು ಕುಕ್ಕರಲ್ಲಿ ಅನ್ನ ಕೂಗಿಸಿಬಿಟ್ಟು, ಸಿಗಡಿ